ಕನ್ನಡ ಪೋಸ್ಟ್
KANNADA POST
ಸಂಪಾದಕ : ಮಂಜು ಬನವಾಸೆ
ಇದು ಸುದ್ದಿ ವಿಳಾಸ
ಕನ್ನಡ ದಿನಪತ್ರಿಕೆ
ಹಾಸನ | E-mail : kannadapostnews@gmail.com | / ಕನ್ನಡ post | Price: ₹1
Vol.No.02 | Issue. 205 | Pages. 2 | Date: 24-07-2026, FRIDAY | RNI NO: KARKAN/2024/89601 | Kannada Daily
ಸಂಪುಟ : 02 - ಸಂಚಿಕೆ : 205 - ಪುಟಗಳು : 2 | 24-07-2026 ಶುಕ್ರವಾರ | Ph: 8762954248 | ದರ : ₹1

# ಸಾರ್ವಜನಿಕರ ನಿದ್ದೆಗೆಡಿಸಿದ ದರೋಡೆ

## ಬಿಗಿಯಾಗಲಿ ಪೊಲೀಸ್ ಗಸ್ತು ವ್ಯವಸ್ಥೆ | ಆಲೂರಿನಲ್ಲಿ ಸಿನಿಮೀಯ ರೀತಿಯ ಕಳವು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಜಿಲ್ಲೆಯ ವಿವಿಧೆಡೆ ಕಳ್ಳತನ ಪ್ರಕರಣಗಳು ಹೆಚ್ಚುತ್ತಲೇ ಇದ್ದು ನಗರ ಹಾಗೂ ಗ್ರಾಮೀಣ ಭಾಗದ ಜನರು ಆತಂಕಕ್ಕೀಡಾಗಿದ್ದಾರೆ.

ಒಂಟಿ ಮನೆ, ಹಲವು ದಿನಗಳ ವರೆಗೆ ಬೀಗ ಹಾಕಿರುವ ಮನೆಗಳನ್ನು ಗುರಿಯಾಗಿಸಿಕೊಳ್ಳುತ್ತಿರುವ ಕಳ್ಳರ ಜಾಲ ವ್ಯವಸ್ಥಿತ ಯೋಜನೆಯೊಂದಿಗೆ ಕಾರ್ಯ ಸಾಧಿಸುತ್ತಿದೆ. ಅಪರಾಧ ಕೃತ್ಯ ತಡೆಗೆ ಪೊಲೀಸ್ ಇಲಾಖೆ ಎಷ್ಟೇ ಮುನ್ನೆಚ್ಚರಿಕೆ ವಹಿಸಿದರೂ ಕಳ್ಳತನ ಪ್ರಕರಣಗಳು ಇಲಾಖೆಯ ಕಾರ್ಯವೈಖರಿಯನ್ನು ಪ್ರಶ್ನಿಸುವಂತಾಗಿದೆ.

ಕುಟುಂಬಸ್ಥರೆಲ್ಲಾ ಊಟ ಮಾಡಿ ಮಲಗಿದ್ದಾಗ ಹಿಂಬಾಗಿಲಿನಿಂದ ಬಂದು ಯುವಕನ ಕೈಕಾಲು ಕಟ್ಟಿಹಾಕಿ ಆತನ ತಂದೆ-ತಾಯಿಗೆ ಹೆದರಿಸಿ ಚಿನ್ನಾಭರಣ ದರೋಡೆ ಮಾಡಿರುವ ಘಟನೆ ತಾಲ್ಲೂಕಿನ ಈಶ್ವರಹಳ್ಳಿ ಕೂಡಿಗೆ ಬಳಿ ಬುಧವಾರ ರಾತ್ರಿ ನಡೆದಿದೆ.

ನಿವೃತ್ತ ಶಿಕ್ಷಕಿ ಚನ್ನಮ್ಮ ಹಾಗೂ ಮಂಜೇಗೌಡ ಅವರ ಮನೆಗೆ ಮಂಕಿ ಕ್ಯಾಪ್, ಮಾಸ್ಕ್ ಧರಿಸಿ ಲಾಂಗ್ ಹಿಡಿದು ಬಂದಿದ್ದ ಮೂವರು ಕಿಡಿಗೇಡಿಗಳು ಹಿಂಬಾಗಿಲಿನಿಂದ ಒಳಪ್ರವೇಶಿಸಿ ಕೊಠಡಿಯಲ್ಲಿ ಮಲಗಿದ್ದ ದಂಪತಿ ಪುತ್ರ ಯಶಸ್‌ನ ಕೈಕಾಲು ಕಟ್ಟಿ ಹಾಕಿದ್ದಾರೆ ಎನ್ನಲಾಗಿದೆ.

ನಾವು ಹೇಳಿದ ಹಾಗೆ ಕೇಳದಿದ್ದರೆ ನಿಮ್ಮ ಮಗನನ್ನು ಕೊಲ್ಲುತ್ತೇವೆಂದು ಬೆದರಿಕೆ ಹಾಕಿದ್ದಾರೆ. ಮಗನ ಜೀವ ಉಳಿದರೆ ಸಾಕು ಎಂದು ದಂಪತಿ ಅಸಹಾಯಕರಾಗಿ ನಿಂತಿದ್ದಾರೆ. 60 ಗ್ರಾಂ ತೂಕದ ಚಿನ್ನ, 50 ಗ್ರಾಂ ತೂಕದ ಬೆಳ್ಳಿ ಆಭರಣ ಕೊಟ್ಟಿದ್ದಾರೆ. ಜೊತೆಗೆ 25 ಸಾವಿರ ರೂ.



ನಗದು, ಮೊಬೈಲ್, ಕೈಗಡಿಯಾರ ದೋಚಿದ್ದಾರೆ.

ಘಟನೆ ಕುರಿತು ಯಶಸ್ ಮಾತನಾಡಿ, ಮೇಲಂತಸ್ತಿನ ಕೊಠಡಿಯಲ್ಲಿ ಮಲಗಿದ್ದೆ. ರಾತ್ರಿ 1.30ರ ಸಮಯದಲ್ಲಿ ಬಂದ ಮೂವರು ಕನ್ನಡದಲ್ಲೇ ಮಾತನಾಡಿಕೊಳ್ಳುತ್ತಿದ್ದರು. ಏಕಾಏಕಿ ನನ್ನ ಕೊಠಡಿಗೆ ಬಂದು ಕೂಗಿದರೆ ಕೊಲೆ ಮಾಡುವುದಾಗಿ ಬೆದರಿಕೆ ಹಾಕಿದರು. ಅವರೇ ತಂದೆ-ತಾಯಿಯನ್ನು ಕರೆದು ಚಿನ್ನಾಭರಣ ಕೊಡುವಂತೆ ಸೂಚಿಸಿದರು. ಅವರು ಹೇಳಿದ ಹಾಗೆ ಕೇಳದಿದ್ದರೆ ಜೀವಕ್ಕೆ ಅಪಾಯವಾಗುವ ಸಂಭವವಿತ್ತು ಎಂದರು.

ಚಾಕು ತೋರಿಸುತ್ತಾ ಮನೆಯೆಲ್ಲಾ ಶೋಧ ನಡೆಸಿದ ಕಳ್ಳರು ತಲೆದಿಂಬಿನ ಕೆಳಗಿಟ್ಟಿದ್ದ ಅಮ್ಮನ ಮಾಂಗಲ್ಯ ಸರವನ್ನೂ ಬಿಟ್ಟಿಲ್ಲ. ತಪ್ಪಿತಸ್ಥರನ್ನು ಶೀಘ್ರ ಪತ್ತೆ ಮಾಡಿ ನ್ಯಾಯ ದೊರಕಿಸಿಕೊಡಬೇಕು ಎಂದು ಆಗ್ರಹಿಸಿದರು. ಸ್ಥಳಕ್ಕೆ ಭೇಟಿ ನೀಡಿದ ಪೊಲೀಸರು ಶ್ವಾನದಳದ ನೆರವಿನಿಂದ ಕಳ್ಳರ ಸುಳಿವು ಪತ್ತೆಹಚ್ಚುವ ಕಾರ್ಯ ನಡೆಸಿದರು. ಆಲೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

**ಹೊಳೆನರಸೀಪುರ ವರದಿ:** ತಾಲೂಕಿನ ಕಾಮಸಮುದ್ರ ಗ್ರಾಮದ ಮನೆಯೊಂದರ ಬೀಗ ಮುರಿದ ಕಳ್ಳರು ಬೀರುವಿನಲ್ಲಿ ಇದ್ದ 70 ಗ್ರಾಂ ಚಿನ್ನದ ಆಭರಣ ಮತ್ತು 1 ಕಿಲೋ 150 ಗ್ರಾಂ ಬೆಳ್ಳಿಯ ಪದಾರ್ಥ ಸೇರಿ 15 ಸಾವಿರ ರೂ. ನಗದು ಕದ್ದೊಯ್ದಿದ್ದಾರೆ.

ಹಳೆಕೋಟೆ ಹೋಬಳಿಯ ಕಾಮಸಮುದ್ರ ಗ್ರಾಮದ ರಮೇಶ್ ಎಂಬುವರ ಮನೆಯವರು ಯಾರೂ ಇರದ ವೇಳೆ ಕಳವು ನಡೆದಿದೆ. ಜು.18 ರ ಶನಿವಾರ ಹಾಸನದ ಮಗಳ ಮನೆಗೆ ಮನೆಯವರು ತೆರಳಿದ್ದರು. ಭಾನುವಾರ ಹಿಂದಿರುಗಿದ ವೇಳೆ ಮನೆಯ ಬೀಗ ಮುರಿದು ಬಾಗಿಲು ತೆರೆದಿತ್ತು. ಇದರಿಂದ ಕಳವು ನಡೆದಿದೆ ಎಂದು ಖಾತ್ರಿಯಾದ ಹಿನ್ನಲೆಯಲ್ಲಿ ರಮೇಶ್ ಪತ್ನಿ ಪ್ರೇಮ ಪಟ್ಟಣದ ಪೊಲೀಸರಿಗೆ ದೂರು ನೀಡಿದ್ದಾರೆ. ಸ್ಥಳ ಮಹಜರ್ ನಡೆಸಿದ ನಗರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

## 21ಗ್ರಾಂ ಚಿನ್ನಾಭರಣ ಕಳವು

ಎಂದಿನಂತೆ ಮನೆಯ ಕಿಟಕಿಯಲ್ಲಿಟ್ಟಿದ್ದ ಕೀ ನೆರವಿನಿಂದ ಒಳಪ್ರವೇಶಿಸಿರುವ ಕಳ್ಳರು 21 ಗ್ರಾಂ ತೂಕದ ಚಿನ್ನಾಭರಣ ಕದ್ದಿರುವ ಘಟನೆ ತಾಲ್ಲೂಕಿನ ದೊಡ್ಡಆಲದಹಳ್ಳಿ ಗ್ರಾಮದಲ್ಲಿ ನಡೆದಿದೆ.

ಡಿ.ಡಿ.ದರ್ಶನ್ ಅವರ ಮನೆಯಲ್ಲಿ ಜು. 20ರಂದು ಘಟನೆ ನಡೆದಿದ್ದು, ಕೀ ಸಹಾಯದಿಂದ ಬೀರುವಿನಲ್ಲಿಟ್ಟಿದ್ದ 15 ಗ್ರಾಂ ತೂಕದ ಕೊರಳ ಚಿನ್ನದ ಚೈನು, 4 ಗ್ರಾಂ ತೂಕದ ಉಂಗುರ ಹಾಗು 2 ಗ್ರಾಂ ತೂಕದ ಉಂಗುರ ಕದ್ದಿದ್ದಾರೆ. ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮತ್ತೊಂದು ಪ್ರಕರಣದಲ್ಲಿ ಬಾಗಿಲ ಬೀಗ ಮುರಿದು 50 ಗ್ರಾಂ ತೂಕದ ಚಿನ್ನಾಭರಣ, 260 ಗ್ರಾಂ ಬೆಳ್ಳಿ ಆಭರಣ ಹಾಗು 50 ಸಾವಿರ ರೂ. ನಗದು ಕಳವು ಮಾಡಿರುವ ಘಟನೆ ಅರಕಲಗೂಡು ತಾಲ್ಲೂಕು ರಘುಪತಿಕೊಪ್ಪಲು ಗ್ರಾಮದಲ್ಲಿ ಇತ್ತೀಚೆಗೆ ನಡೆದಿದೆ.

ಮನೆ ಮಾಲೀಕರಾದ ರಜಿನಿ ಹಾಗೂ ಪ್ರತಾಪ್ ಅವರು



ಜು. 17ರಂದು ಮನೆಗೆ ಬೀಗ ಹಾಕಿ ಕೇರಳ ಪ್ರವಾಸಕ್ಕೆ ತೆರಳಿದ್ದರು. ಎರಡು ದಿನಗಳ ಬಳಿಕ ಬಂದಾಗ ಮನೆ ಬಾಗಿಲ ಬೀಗ ಮುರಿದಿರುವುದು ಗೊತ್ತಾಗಿದೆ. ಬೀರುವಿನಲ್ಲಿದ್ದ 16 ಗ್ರಾಂ ತೂಕದ ಚಿನ್ನದ ಸರ, 2 ಗ್ರಾಂನ ಚಿನ್ನದ ಡಾಲರ್, 5 ಗ್ರಾಂ ತೂಕದ ಹಸಿರು ಕಲ್ಲಿನ ಚಿನ್ನದ ಒಂದು ಉಂಗುರ, 5 ಗ್ರಾಂ ತೂಕದ ಚಿನ್ನದ ಕೆಂಪು ಮತ್ತು ಬಿಳಿ ಮಿಶ್ರಿತ ಕಲ್ಲಿನ 1 ಉಂಗುರ, 3 ಗ್ರಾಂ ತೂಕದ ಒಂದು ಜೊತೆ ಓಲೆ, 8 ಗ್ರಾಂನ ಬಿಳಿ ಬಣ್ಣದ ಜುಮುಕಿ, ಬಿಳಿ ಹರಳಿನ 10 ಗ್ರಾಂ ತೂಕದ ಒಂದು ಜೊತೆ ಓಲೆ, ಸುಮಾರು 260 ಗ್ರಾಂ ತೂಕದ ಬೆಳ್ಳಿ ಚೊಂಬು ಹಾಗೂ 50 ಸಾವಿರ ರೂ. ನಗದು ಕಳವು ಮಾಡಲಾಗಿದೆ. ಕೊಣನೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮತ್ತೊಂದು ಪ್ರಕರಣದಲ್ಲಿ ಸ್ಕೂಟಿಯಲ್ಲಿ ತೆರಳುತ್ತಿದ್ದ ಮಹಿಳೆಯನ್ನು ಅಡ್ಡಹಾಕಿದ ಅಪರಿಚಿತರು ಚಿನ್ನದ ಮಾಂಗಲ್ಯ ಸರ ಕಿತ್ತುಕೊಂಡು ಪರಾರಿಯಾಗಿರುವ ಘಟನೆ ಹೊಳೆನರಸೀಪುರ ತಾಲ್ಲೂಕು ಅತ್ತಿಚೌಡನಹಳ್ಳಿ ಗ್ರಾಮದ ಬಳಿ ನಡೆದಿದೆ.

ಕಲ್ಲೇನಹಳ್ಳಿ ಗ್ರಾಮದ ದಿವ್ಯ ಎಂಬುವವರ 30 ಗ್ರಾಂ ತೂಕದ ಸರ ಕಳುವಾಗಿದೆ. ಜಮೀನು ಕೆಲಸದ ಹಿನ್ನಲೆಯಲ್ಲಿ ಅವರು ಹೋಗುತ್ತಿದ್ದಾಗ ಅಡ್ಡ ಹಾಕಿದ ಮೂವರು ಅಪರಿಚಿತರು ಚಾಕು ತೋರಿಸಿ ಕುತ್ತಿಗೆಯಲ್ಲಿದ್ದ ಚಿನ್ನದ ಸರ ಕಿತ್ತುಕೊಂಡು ಪರಾರಿಯಾಗಿದ್ದಾರೆ. ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ತಾಯಿ ಚೆನ್ನಮ್ಮ ನೆನೆದು ಮತ್ತೆ ಕಣ್ಣೀರಿಟ್ಟ ರೇವಣ್ಣ

## ಅನ್ನಪೂರ್ಣೆ ಅಗಲಿಕೆಗೆ ಭಾವುಕ | ದು:ಖದಲ್ಲಿ ಭಾಗಿಯಾದವರಿಗೆ ಕೃತಜ್ಞತೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಇತ್ತೀಚೆಗೆ ನಿಧನರಾದ ತಾಯಿ ಚೆನ್ನಮ್ಮ ಅವರ ಅಂತ್ಯಕ್ರಿಯೆಗೆ ಸಹಕಾರ ನೀಡಿದ ಪ್ರತಿಯೊಬ್ಬರಿಗೂ ಧನ್ಯವಾದ ಹೇಳಿದ ಪುತ್ರ ಹಾಗೂ ಮಾಜಿ ಸಚಿವ ಎಚ್.ಡಿ.ರೇವಣ್ಣ, ತಾಯಿಯಿಂದಲೇ ತಮ್ಮ ಕುಟುಂಬ ಈ ಹಂತಕ್ಕೆ ಬೆಳೆಯಲು ಕಾರಣವಾಯಿತು ಎಂದು ಮತ್ತೊಮ್ಮೆ ಕಣ್ಣೀರಿಟ್ಟರು.

ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿದ ಅವರು, ಸಾಮಾನ್ಯ ಪಟೇಲ್ ಕುಟುಂಬದಲ್ಲಿ ಹುಟ್ಟಿದರೂ, ನಮ್ಮ ತಂದೆಯ ಏಳಿಗೆಯಲ್ಲಿ ತಾಯಿ ಪಾತ್ರ ಪ್ರಮುಖವಾಗಿದೆ ಎಂದರು.

ಹಾಗೆಯೇ ಕಷ್ಟದಲ್ಲಿದ್ದವರಿಗೆ ಕೈಲಾದ ಸಹಾಯ ಮಾಡುತ್ತಿದ್ದರು, ಮನೆಗೆ ಯಾರೇ ಬರಲಿ ಊಟ ಹಾಕುತ್ತಿದ್ದರು.ಆ ದೇವತೆಯನ್ನು ಕಳೆದು ಕೊಂಡ ದುಃಖ ತಡೆಯಲಾಗುತ್ತಿಲ್ಲ. ಅನ್ನ ಹಾಕುವುದರ ಜೊತೆಗೆ ವಿದ್ಯಾಭ್ಯಾಸಕ್ಕೆ ಸಹಾಯ ಮಾಡಿದ್ದಾರೆ, ಕೆಲಸ ಕೊಡಿಸಿದ್ದಾರೆ, ಸಂಪೂರ್ಣ ಸಸ್ಯಹಾರಿಯಾಗಿ ನಿತ್ಯ ದೇವರ ಪೂಜೆ ಮಾಡುತ್ತಿದ್ದರು. ಎಲ್ಲ ಮಂತ್ರಗಳನ್ನು ಹೇಳುತ್ತಿದ್ದರು.

ಅಂತ್ಯಕ್ರಿಯೆಗೆ ಬಹುತೇಕ ಮಠಗಳ ಮಹಾ ಸ್ವಾಮೀಜಿಗಳು, ಪಕ್ಷಾತೀತವಾಗಿ ರಾಜ್ಯದ ಮುಖ್ಯಮಂತ್ರಿ ಸೇರಿ ಕೇಂದ್ರ ಮತ್ತು ರಾಜ್ಯ ಸಚಿವರು, ಎಲ್ಲ ರಾಜಕಾರಣಿಗಳು ಆಗಮಿಸಿದ್ದರು. ಜಿಲ್ಲಾಡಳಿತದ ಅಧಿಕಾರಿಗಳು, ವಿಶೇಷವಾಗಿ ಪೊಲೀಸ್ ಇಲಾಖೆಯಲ್ಲಿ ಸ್ವತಃ ಐಜಿ ಅವರೇ ಆಗಮಿಸಿದ್ದರು. ಹಾಗೆಯೇ ಮಾಧ್ಯಮಗಳು ಸಾಕಷ್ಟು ಸಹಕಾರ ನೀಡಿದ್ದಕ್ಕೆ ಧನ್ಯವಾದ. ಎಲ್ಲರ ಉಪಕಾರ ಎಂದೂ ಮರೆಯುವುದಿಲ್ಲ ಎಂದರು.

ಶನಿವಾರ ಸುಮಾರು 3.45ರ ಸುಮಾರಿಗೆ ತಂದೆಯವರು ದೇವರ ಪ್ರಸಾದ ಕೊಟ್ಟು, ಹಣೆಗೆ ಕುಂಕುಮ ಹಚ್ಚಿ, ಹೂ ಮುಡಿಸಿದ ಕೂಡಲೇ ನಮ್ಮ ತಾಯಿ ಕೊನೆಯುಸಿರೆಳೆದರು ಎಂದ ರೇವಣ್ಣ,

ಇಂತಹ ಸಾವು ಯಾರಿಗೂ ಸಿಗುವುದಿಲ್ಲ. ಅದಕ್ಕೂ ಮುನ್ನ ತಾವು ಧರ್ಮಸ್ಥಳಕ್ಕೆ ಹೋಗಿ ವಿಶೇಷ ಪೂಜೆ ಮಾಡಿಸಿಕೊಂಡು ಬಂದಿದ್ದರೂ, ಪ್ರಸಾದ ಕೊಡಲಾಗಲಿಲ್ಲ ಎಂದು ಮರುಗಿದರು.

ಜಿಲ್ಲೆಯ ಜನರನ್ನು ನಾನು ಯಾವತ್ತೂ ಮರೆಯುವುದಿಲ್ಲ, ಅವರಿಗೂ ಧನ್ಯವಾದಗಳು. ಜು.30 ರಂದು ತಾಯಿಯ ಆರಾಧನಾ ಮಹೋತ್ಸವ ನಡೆಯಲಿದ್ದು, ಪ್ರತಿಯೊಬ್ಬರೂ, ಪಕ್ಷಾತೀತವಾಗಿ ಆಗಮಿಸಿ ಅಮ್ಮನ ಆತ್ಮಕ್ಕೆ ಶಾಂತಿ ಕೋರಬೇಕು ಎಂದು ವಿನಂತಿಸಿದರು.

ಇದೇ ವೇಳೆ ತಂದೆ-ತಾಯಿ 72 ವರ್ಷ ಸುದೀರ್ಘ ವೈವಾಹಿಕ ಜೀವನ ನಡೆಸಿದ್ದನ್ನು ಸ್ಮರಿಸಿದ ರೇವಣ್ಣ, ತಂದೆಯ ಏಳಿಗೆಯಲ್ಲಿ ನಮ್ಮ ತಾಯಿ ಕೊಡುಗೆ ಅಪಾರ ಇದೆ. ನಾನು ಕುಮಾರಸ್ವಾಮಿ,

ಈ ಮಟ್ಟಕ್ಕೆ ಬರಲು ಅವರ ಆಶೀರ್ವಾದ ಕಾರಣ, ಅವರ ಪೂಜಾಫಲದಿಂದ ನಮ್ಮ ಕುಟುಂಬ ಈ ಹಂತಕ್ಕೆ ಬೆಳೆದಿದೆ. ಮನೆಯೊಳಗಿದ್ದೇ ಎಲ್ಲವನ್ನೂ ಮಾಡಿದರು, ಅವರಿಗೆ ಇಷ್ಟೊಂದು ಅಭಿಮಾನಿಗಳು ಎಂದು ಗೊತ್ತಿರಲಿಲ್ಲ ಎಂದು ಭಾವುಕರಾದರು.

1962ರಲ್ಲಿ ನಮ್ಮ ತಂದೆ ಹೊಳೆನರಸೀಪುರದಲ್ಲಿ ಎರಡು ಕಡೆ 10 ರೂ.ಬಾಡಿಗೆ ಮನೆಯಲ್ಲಿದ್ದರು. ಅಲ್ಲಿ ಮತ್ತು ಆಗಲೇ ಪಡುವಲಹಿಪ್ಪೆಯಲ್ಲಿ ಒಡವೆ ಅಡಮಾನ ಇಟ್ಟು 1500 ರೂ.ಗೆ 12 ಎಕರೆ ಜಮೀನು ಖರೀದಿ ಮಾಡಿ 8 ಸಾವಿರದಲ್ಲ ಮಣ್ಣಿನ ಗೋಡೆ ಕಟ್ಟಿ ಮನೆ ನಿರ್ಮಿಸಿದ್ದರು. ಆ ಕಾರಣಕ್ಕೆ ಮೂರು ಕಡೆಗೂ ಪಾರ್ಥಿವ ಶರೀರ ಕೊಂಡೊಯ್ಯಲಾಯಿತು. ಹೋದ ಕಡೆ ಮಡಿಲಕ್ಕಿ ಕೊಟ್ಟು ಗೌರವಿಸಿದರು ಎಂದು ನೆನೆದರು.

### ಇನ್ನೂ 10 ವರ್ಷ ಬದುಕಿರುತ್ತಿದ್ದರು

ಅವರೆಂದೂ ಒಂದು ಮನೆ ಕಟ್ಟಲಿಲ್ಲ, ಒಂದು ಕಾರು ಖರೀದಿ ಮಾಡಿಲ್ಲ ಎಂದು ಕಣ್ಣೀರಿಟ್ಟರು. 2001 ರಲ್ಲಿ ಆ್ಯಸಿಡ್ ದಾಳಿ ನಡೆಯದಿದ್ದರೆ ಇನ್ನೂ 10 ವರ್ಷ ಬದುಕಿರುತ್ತಿದ್ದರು. ಆಗ

ರೇವಣ್ಣನನ್ನ ಮುಗಿಸಲೇಬೇಕು ಎಂದು ಸಂಚು ರೂಪಿಸಿದ್ದರು. ಆದರೆ ಅಂದು ಶಿವರಾತ್ರಿಯಂದು ನಾನು ಮಹದೇಶ್ವರ ಬೆಟ್ಟಕ್ಕೆ ಹೋಗಿದ್ದೆ, ಇಲ್ಲದಿದ್ದರೆ ನನ್ನ ಮೇಲೆ ದಾಳಿ ನಡೆಯುತ್ತಿತ್ತು.

ನನ್ನ ಬದಲಿಗೆ ತಾಯಿ ನೋವು ತಿಂದರು ಎಂದರು.

ಅಪ್ಪಟ ದೈವಭಕ್ತರಾಗಿದ್ದ ತಾಯಿ ಕುಲದೇವರು ರಂಗನಾಥಸ್ವಾಮಿ ಪಾದದಡಿಯಲ್ಲಿ ಇರಬೇಕೆಂದು ಅಲ್ಲಿ ಅಂತ್ಯಕ್ರಿಯೆ ಮಾಡಿದ್ದೇವೆ. ನಮ್ಮ ತಂದೆ ಪಡುವಲಹಿಪ್ಪೆಯಲ್ಲಿ ಮಾಡೋಣ ಎಂದರು. ಆದರೆ ತಮ್ಮ ಕುಮಾರಸ್ವಾಮಿ ಇಲ್ಲೇ ಮಾಡೋಣ ಎಂದು ಹಠ ಹಿಡಿದರು. ಅದಕ್ಕಾಗಿ ಅವರು ಮೊದಲೇ ಅಲ್ಲಿ ಜಾಗ ಖರೀದಿ ಮಾಡಿದರು. ಹಾಗಾಗಿ ಮಾವಿನಕೆರೆ ಬೆಟ್ಟದ ರಂಗನಾಥಸ್ವಾಮಿ ಸನ್ನಿಧಾನದ ತಟದಲ್ಲಿ ಅಂತ್ಯಕ್ರಿಯೆ ಮಾಡಿದೆವು ಎಂದು ವಿವರಿಸಿದರು.

# ಕೇಂದ್ರದ ವಿರುದ್ಧ ಹಾಸನದಲ್ಲೂ ಪ್ರತಿಭಟನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**




ಹಾಸನ: ನೀಟ್ ಪರೀಕ್ಷೆ ಅಕ್ರಮ ಖಂಡಿಸಿ ಹಾಗೂ ನವದೆಹಲಿಯಲ್ಲಿ ನಡೆಯುತ್ತಿರುವ ಹೋರಾಟ ಬೆಂಬಲಿಸಿ ನಗರದಲ್ಲಿ ಎಸ್‌ಎಫ್‌ಐ ಮತ್ತು ಡಿ.ವೈ.ಎಫ್.ಐ. ಜಿಲ್ಲಾ ಘಟಕದ ನೇತೃತ್ವದಲ್ಲಿ ಗುರುವಾರ ಪ್ರತಿಭಟನೆ ನಡೆಸಲಾಯಿತು.

ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ವಿದ್ಯಾರ್ಥಿಗಳು ಹಾಗೂ ಸಂಘಟನೆ ಕಾರ್ಯಕರ್ತರು ಧರಣಿ ನಡೆಸಿ, ಕೇಂದ್ರ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ದೇಶದ ಲಕ್ಷಾಂತರ ವಿದ್ಯಾರ್ಥಿಗಳ ಭವಿಷ್ಯವನ್ನು ನಿರ್ಧರಿಸುವ ನೀಟ್‌ನಂತಹ ಮಹತ್ವದ ಪರೀಕ್ಷೆಯಲ್ಲಿ ಅಕ್ರಮಗಳು ನಡೆದಿರುವುದು ಅತ್ಯಂತ ಆತಂಕಕಾರಿ ಬೆಳವಣಿಗೆಯಾಗಿದೆ. ಇದರಿಂದ ಪರೀಕ್ಷಾ ವ್ಯವಸ್ಥೆಯ ಮೇಲಿನ ನಂಬಿಕೆ ಕುಸಿದಿದ್ದು, ವಿದ್ಯಾರ್ಥಿಗಳಲ್ಲಿ ಅನಿಶ್ಚಿತತೆ ಮತ್ತು ಆತಂಕ ಸೃಷ್ಟಿಯಾಗಿದೆ ಎಂದು ಆರೋಪಿಸಿದರು.

ಎಸ್‌ಎಫ್‌ಐ ಜಿಲ್ಲಾ ಕಾರ್ಯದರ್ಶಿ ರಮೇಶ್, ನೀಟ್ ಪರೀಕ್ಷೆ ಅಕ್ರಮ ಪ್ರಕರಣದ ಸಂಪೂರ್ಣ ನೈತಿಕ ಹೊಣೆಯನ್ನು ಕೇಂದ್ರ ಸರ್ಕಾರ ಹೊತ್ತುಕೊಳ್ಳಬೇಕು. ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಕೂಡಲೇ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿ ನಿಷ್ಪಕ್ಷಪಾತ ತನಿಖೆಗೆ ಅವಕಾಶ ಮಾಡಿಕೊಡಬೇಕು ಎಂದು ಒತ್ತಾಯಿಸಿದರು.

ಪ್ರಧಾನಮಂತ್ರಿ ನರೇಂದ್ರ ಮೋದಿ ದೇಶದ ವಿದ್ಯಾರ್ಥಿಗಳು ಮತ್ತು ಪೋಷಕರ ಕ್ಷಮೆ ಕೇಳಬೇಕು. ದೇಶದ ಉನ್ನತ ಶಿಕ್ಷಣ ಪ್ರವೇಶ ಪರೀಕ್ಷೆಗಳ ವಿಶ್ವಾಸಾರ್ಹತೆ ಮರುಸ್ಥಾಪಿಸಲು ಸುಪ್ರೀಂಕೋರ್ಟ್ ಮೇಲ್ವಿಚಾರಣೆಯಲ್ಲಿ ಅಥವಾ ಸ್ವತಂತ್ರ ಸಂಸ್ಥೆ ಮೂಲಕ ಸಮಗ್ರ ತನಿಖೆ ನಡೆಸಬೇಕು ಎಂದು ಆಗ್ರಹಿಸಿದರು. ನೀಟ್ ಅಕ್ರಮದಲ್ಲಿ ಭಾಗಿಯಾಗಿರುವ ಎಲ್ಲ ವ್ಯಕ್ತಿಗಳು, ಅಧಿಕಾರಿಗಳು ಹಾಗೂ ಮಧ್ಯವರ್ತಿಗಳನ್ನು ಗುರುತಿಸಿ ಕಾನೂನು ಪ್ರಕಾರ ಕಠಿಣ ಶಿಕ್ಷೆಗೆ ಒಳಪಡಿಸಬೇಕು. ಯಾವುದೇ ಪ್ರಭಾವಕ್ಕೆ ಮಣಿಯದೆ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಂಡಾಗ ಮಾತ್ರ ವಿದ್ಯಾರ್ಥಿಗಳಲ್ಲಿ ವಿಶ್ವಾಸ ಮೂಡಲಿದೆ ಎಂದು ಹೇಳಿದರು.

ಕೇಂದ್ರ ಸರ್ಕಾರ ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸದಿದ್ದರೆ ಹಾಗೂ ಶಿಕ್ಷಣ ಸಚಿವರು ರಾಜೀನಾಮೆ ನೀಡದಿದ್ದರೆ, ಮುಂದಿನ ದಿನಗಳಲ್ಲಿ ರಾಜ್ಯಾದ್ಯಂತ ಉಗ್ರ ಹೋರಾಟ ಸಂಘಟಿಸಲಾಗುವುದು ಎಂದು ಎಚ್ಚರಿಕೆ ನೀಡಿದರು. ಬಳಿಕ ಪ್ರತಿಭಟನಾಕಾರರು ಜಿಲ್ಲಾಡಳಿತದ ಮೂಲಕ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಿ, ನೀಟ್ ಅಕ್ರಮದ ಸಮಗ್ರ ತನಿಖೆ ನಡೆಸಿ ವಿದ್ಯಾರ್ಥಿಗಳಿಗೆ ನ್ಯಾಯ ಒದಗಿಸಬೇಕು, ಪರೀಕ್ಷಾ ವ್ಯವಸ್ಥೆಯನ್ನು ಪಾರದರ್ಶಕ ಮತ್ತು ವಿಶ್ವಾಸಾರ್ಹವಾಗಿಸಲು ಅಗತ್ಯ ಸುಧಾರಣೆ ಜಾರಿಗೆ ತರಬೇಕು ಎಂದು ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ಎಸ್‌ಎಫ್‌ಐ ಮತ್ತು ಡಿ.ವೈ.ಎಫ್.ಐ ಹಾಗೂ ಸಿಐಟಿಯುನ ಎಂ.ಜಿ. ಪೃಥ್ವಿ, ಧರ್ಮೇಶ್, ಕೆ.ಪಿ.ಆರ್.ಎಸ್. ಜಿಲ್ಲಾಧ್ಯಕ್ಷ ಹೆಚ್.ಆರ್. ನವೀನ್ ಕುಮಾರ್, ಅರವಿಂದ್, ಬಾಳೆಹಣ್ಣು ವರ್ತಕರ ಸಂಘದ ಅಧ್ಯಕ್ಷ ಸಮೀರ್, ದಲಿತ ಮುಖಂಡ ಕೃಷ್ಣದಾಸ್, ಶಿವಣ್ಣ ಹಾಗೂ ಪದಾಧಿಕಾರಿಗಳು, ವಿದ್ಯಾರ್ಥಿಗಳು ಭಾಗವಹಿಸಿದ್ದರು.

# ಸಾಲ ವಸೂತಿಯಲ್ಲೂ ಬೇಲೂರು ಗ್ರಾಮೀಣ ಬ್ಯಾಂಕ್ ಪ್ರಗತಿ

ಬೇಲೂರು: ಬೇಲೂರು ಪ್ರಾಥಮಿಕ ಕೃಷಿ ಮತ್ತು ಗ್ರಾಮೀಣ ಬ್ಯಾಂಕ್ 2025-26ನೇ ಸಾಲಿನಲ್ಲಿ 49.42 ಲಕ್ಷ ರೂ. ನಿವ್ವಳ ಲಾಭ ಗಳಿಸಿದ್ದು, ಸಾಲ ವಸೂಲಾತಿಯಲ್ಲೂ ಸಾಧನೆ ಮಾಡಿದೆ ಎಂದು ಬ್ಯಾಂಕ್ ಅಧ್ಯಕ್ಷ ಎಂ.ಡಿ.ದಿನೇಶ್ ಹೇಳಿದರು.

ಪಟ್ಟಣದ ವೀರಶೈವ ಕಲ್ಯಾಣ ಮಂಟಪದಲ್ಲಿ ಗುರುವಾರ ಆಯೋಜಿಸಿದ್ದ ಪ್ರಾಥಮಿಕ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್‌ನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ರೈತರು ಬ್ಯಾಂಕ್‌ನಿಂದ ಪಡೆದ ಸಾಲವನ್ನು ನಿಗದಿತ ಅವಧಿಯೊಳಗೆ ಮರು ಪಾವತಿ ಮಾಡಿದರೆ ಮಾತ್ರ ಬ್ಯಾಂಕ್‌ನ ಆರ್ಥಿಕ ಸ್ಥಿತಿ ಸದೃಢಗೊಂಡು ಬೇರೆ ರೈತರಿಗೆ ಸಾಲ ಸೌಲಭ್ಯ ಕಲ್ಪಿಸಲು ಸಾಧ್ಯ. ಸರ್ಕಾರ ರೈತರು, ಮಹಿಳೆಯರು ಹಾಗೂ ಸಾರ್ವಜನಿಕರ ಹಿತದೃಷ್ಟಿಯಿಂದ ಕೆಲ ಯೋಜನೆಗಳಲ್ಲಿ ಶೂನ್ಯ ಬಡ್ಡಿ ದರದಲ್ಲಿ ಸಾಲ ನೀಡುತ್ತಿದೆ. ಈ ಯೋಜನೆಗಳ ಯಶಸ್ಸಿಗೆ ಫಲಾನುಭವಿಗಳು ಸಾಲವನ್ನು ಸಮಯಕ್ಕೆ ಸರಿಯಾಗಿ ಮರುಪಾವತಿ ಮಾಡುವುದು ಅತ್ಯಗತ್ಯ. ಅಲ್ಲದೆ 1953ರಿಂದ ಕಾರ್ಯನಿರ್ವಹಿಸುತ್ತಿರುವ ಬ್ಯಾಂಕ್ ಕೃಷಿ ಅಭಿವೃದ್ಧಿಗೆ ಪೂರಕವಾಗಿ ವಿವಿಧ ಸಾಲ ಸೌಲಭ್ಯಗಳನ್ನು ಒದಗಿಸುತ್ತಿದೆ. ಜಿಲ್ಲೆಯಲ್ಲಿಯೇ ಮಾದರಿ ಬ್ಯಾಂಕ್ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಬ್ಯಾಂಕ್‌ನ ಉತ್ತಮ ಕಾರ್ಯನಿರ್ವಹಣೆ ಪರಿಗಣಿಸಿ ರಾಜ್ಯ ಮಟ್ಟದಲ್ಲಿ ಮೊದಲ ಬಾರಿಗೆ 7 ಕೋಟಿ ರೂ. ಹೆಚ್ಚುವರಿ ಸಾಲ ಮಂಜೂರಾಗಿದ್ದು ಬ್ಯಾಂಕ್‌ಗೆ ಸಂದ ಗೌರವವಾಗಿದೆ. ಬ್ಯಾಂಕ್‌ಗೆ ಸಂಬಂಧಿಸಿದ ನಿವೇಶನದ ವಿವಾದ ನ್ಯಾಯಾಲಯದಲ್ಲಿದ್ದು, ಪರ್ಯಾಯ ಜಾಗ ಗುರುತಿಸಿ ಶಾಶ್ವತ ನಿವೇಶನ ಕಲ್ಪಿಸಲು ಪ್ರಯತ್ನಗಳು ನಡೆಯುತ್ತಿವೆ. ಮುಂದಿನ ಸಾಮಾನ್ಯ ಸಭೆಯೊಳಗೆ ಈ ಕುರಿತು ಸಿಹಿ ಸುದ್ದಿ ನೀಡಲಾಗುವುದು. ಬ್ಯಾಂಕ್‌ನ ನಿರ್ದೇಶಕರು ಅಥವಾ ಸದಸ್ಯರು ಸಾಲ ಮರುಪಾವತಿಯಿಂದ ವಿನಾಯಿತಿ ಪಡೆದಿಲ್ಲ. ಬಾಕಿ ಉಳಿಸಿಕೊಂಡವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುತ್ತಿದೆ. ಚುನಾವಣೆಗೆ ಸಂಬಂಧ ಅರ್ಹತೆ ಹಾಗು ಅನರ್ಹತೆ ಕುರಿತು ಅಂತಿಮ ನಿರ್ಧಾರ ಚುನಾವಣಾಧಿಕಾರಿ ಮತ್ತು ನ್ಯಾಯಾಲಯದ ವ್ಯಾಪ್ತಿಗೆ ಸೇರಿದೆ ಎಂದರು.

# ಚೆನ್ನಮ್ಮ ದೇವೇಗೌಡರ ಜೀವನ ಮಾದರಿಯಾಗಲಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಆಲೂರು: ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರ ರಾಜಕೀಯ ಏಳು ಬೀಳುಗಳ ಸುದೀರ್ಘ ಪಯಣದಲ್ಲಿ ಆದರ್ಶ ಗೃಹಿಣಿಯಾಗಿ ಸಾಥ್ ನೀಡಿದ್ದ ಚೆನ್ನಮ್ಮ ಅವರ ಸರಳತೆಯನ್ನು ಪ್ರಸ್ತುತ ದಿನಗಳಲ್ಲಿ ನಾವೆಲ್ಲ ಅನುಸರಿಸಬೇಕಾದ ಅವಶ್ಯಕತೆ ಇದೆ ಎಂದು ಮಾಜಿ ಸಚಿವ ಎಚ್.ಕೆ. ಕುಮಾರಸ್ವಾಮಿ ಸ್ಮರಿಸಿದರು.

ಪಟ್ಟಣದ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ಜೆಡಿಎಸ್ ತಾಲೂಕು ಘಟಕದಿಂದ ಹಮ್ಮಿಕೊಂಡಿದ್ದ ಶ್ರದ್ಧಾಂಜಲಿ ಸಭೆಯಲ್ಲಿ ಸಂತಾಪ ಸೂಚಿಸಿ ಮಾತನಾಡಿದರು. ತಮ್ಮ ಸರಳತೆ, ಸಂಸ್ಕಾರ ಮತ್ತು ಕುಟುಂಬ ಮೌಲ್ಯಗಳ ಸಾಕಾರ ಮೂರ್ತಿಗಳಾಗಿದ್ದ ತಾಯಿ ಶ್ರೀಮತಿ ಚೆನ್ನಮ್ಮನವರ ಅಗಲಿಕೆಯಿಂದ ಶ್ರೀ ದೇವೇಗೌಡರ ದೊಡ್ಡ ಕುಟುಂಬ ಮಾತ್ರವಲ್ಲ, ಜೆಡಿಎಸ್ ಪಕ್ಷದ ಕಾರ್ಯಕರ್ತರೂ ಕೂಡ ಮಾತೃಛಾಯೆಯನ್ನು ಕಳೆದುಕೊಂಡಂತಾಗಿದೆ.

ಬೆಂಗಳೂರಿನಿಂದ ಹೊರಟ ಅವರ ಮೃತ ದೇಹದ ಅಂತಿಮ ಯಾತ್ರೆಯು ಹೊಳೆನರಸೀಪುರವನ್ನು



ತಲುಪಲು ಸುಮಾರು 17 ಗಂಟೆಗಳ ಕಾಲ ಸಮಯ ತೆಗೆದುಕೊಂಡಿತ್ತು ಎಂದರೆ ಅಂತಿಮ ದರ್ಶನ ಪಡೆಯಲು ಆ ದಾರಿಯುದ್ದಕ್ಕೂ ಕಾಯ್ದು ಕುಳಿತ ಜನ ಸಮೂಹವನ್ನ ನೋಡಿದರೆ ಚೆನ್ನಮ್ಮನವರು ಎಷ್ಟರ ಮಟ್ಟಿಗೆ ಜನಾನುರಾಗಿಯಾಗಿದ್ದರು ಎಂಬುದಕ್ಕೆ ಸಾಕ್ಷಿಯಾಗಿದೆ ಎಂದು ಅಭಿಪ್ರಾಯಪಟ್ಟರು.

ತಾಲೂಕು ಜೆಡಿಎಸ್ ಅಧ್ಯಕ್ಷ ಕೆ.ಎಸ್. ಮಂಜೇಗೌಡ ಮಾತನಾಡಿ, ಚೆನ್ನಮ್ಮನವರು ಮಹಾದೈವಭಕ್ತರಾಗಿದ್ದು ಅವರ ಜೀವಿತ ಅವಧಿಯಲ್ಲಿ ದೇವೇಗೌಡರು ವಿರೋಧ ಪಕ್ಷದ ನಾಯಕ, ಮುಖ್ಯಮಂತ್ರಿ, ಪ್ರಧಾನಿ ಹಾಗೂ ಅವರ ಮಗ ಎಚ್.ಡಿ. ಕುಮಾರಸ್ವಾಮಿ ಅವರು ಎರಡು ಬಾರಿ ರಾಜ್ಯದ ಮುಖ್ಯಮಂತ್ರಿ ಆಗಿದ್ದಾಗ ಒಂದು ದಿನವೂ ಕೂಡ ಮಾಧ್ಯಮದ ಮುಂದೆ ಹೇಳಿಕೆ ಕೊಡದೆ ಹಾಗೂ ಯಾವುದೇ ರಾಜಕೀಯ ವಿಷಯಗಳಲ್ಲಿ ಮೂಗು ತೂರಿಸದೆ ಕುಟುಂಬ ಮತ್ತು ಮಕ್ಕಳ ಏಳಿಗೆಗೆ ಶ್ರಮಿಸುತ್ತ ಇತರ ರಾಜಕಾರಣಿಗಳ ಪತ್ನಿಯರಿಗೆ ಆದರ್ಶರಾಗಿದ್ದಾರೆ ಎಂದರು.

ಜಿಲ್ಲಾ ಹಿಂದುಳಿದ ವರ್ಗಗಳ ಮುಖಂಡ ಬಿ.ಸಿ. ಶಂಕರಾಚಾರ್, ಬಿಜೆಪಿ ಜಿಲ್ಲಾ ಮಾಜಿ ಉಪಾಧ್ಯಕ್ಷ ಕದಾಳು ಲೋಕೇಶ್, ಜಿಲ್ಲಾ ಸಹಕಾರ ಯೂನಿಯನ್ ಉಪಾಧ್ಯಕ್ಷ ರಾಜಪ್ಪಗೌಡ, ತಾಲೂಕು ಪಂಚಾಯಿತಿ ಮಾಜಿ ಉಪಾಧ್ಯಕ್ಷ ಕೆ.ಎನ್. ಕಾಂತರಾಜು, ಮಾಜಿ ಸದಸ್ಯ ನಟರಾಜು ನಾಕಲಗೂಡು, ಬಿಜೆಪಿ ತಾಲೂಕು ಮಾಜಿ ಪ್ರಧಾನ ಕಾರ್ಯದರ್ಶಿ ಹೇಮಂತ್ ಕುಮಾರ್ ಇತರರಿದ್ದರು.

# ಅಂತಾರಾಷ್ಟ್ರೀಯ ಮಟ್ಟದ ಕಾಫಿ ಉತ್ಪಾದನೆಗೆ ಆದ್ಯತೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಕಾಫಿ ಬೆಳೆಗಾರರು ರಾಸಾಯನಿಕ ಅತಿಯಾದ ಬಳಕೆಯನ್ನು ಕಡಿಮೆ ಮಾಡಿ, ಸಾವಯವ ಗೊಬ್ಬರ ಹಾಗೂ ಪರಿಸರ ಸ್ನೇಹಿ ಕೃಷಿ ಪದ್ಧತಿ ಅಳವಡಿಸಿಕೊಳ್ಳುವ ಮೂಲಕ ಅಂತಾರಾಷ್ಟ್ರೀಯ ಮಟ್ಟದ ಗುಣಮಟ್ಟದ ಕಾಫಿ ಉತ್ಪಾದನೆಗೆ ಆದ್ಯತೆ ನೀಡಬೇಕು ಎಂದು ಕಾಫಿ ಮಂಡಳಿಯ ಜಂಟಿ ನಿರ್ದೇಶಕ ನಂದಗೋಪಾಲ್ ತಿಳಿಸಿದರು.

ಜಿಲ್ಲಾ ಪ್ಲಾಂಟರ್ಸ್ ಸಂಘದಿಂದ ಕಾಫಿ ಮಂಡಳಿಯ ಸೆಂಟರ್ ಆಫ್ ಎಕ್ಸಲೆನ್ಸ್ ಪ್ರಯೋಗಾಲಯ ಹಾಗೂ ಎನ್.ಕೆ.ಜಿ. ಕಾಫಿ ಕ್ಯೂರಿಂಗ್ ವರ್ಕ್‌ನಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ರಾಸಾಯನಿಕ ಗೊಬ್ಬರಗಳ ಜೊತೆಗೆ ಸಾವಯವ ಗೊಬ್ಬರ ಹಾಗೂ ಜೈವಿಕ ಔಷಧಿಗಳ ಬಳಕೆಯಿಂದ ಮಣ್ಣಿನ ಫಲವತ್ತತೆ ಹೆಚ್ಚುವುದರ ಜೊತೆಗೆ ಗುಣಮಟ್ಟದ ಕಾಫಿ ಉತ್ಪಾದನೆ ಸಾಧ್ಯವಾಗುತ್ತದೆ ಎಂದು ತಿಳಿಸಿದರು.




ಕಾಫಿ ಮಂಡಳಿಯ ಉಪನಿರ್ದೇಶಕಿ ಡಾ.ಜ್ಯೋತಿ ಮಾತನಾಡಿ, ಬೆಳೆಗಾರರಿಗೆ ಕಾಫಿ ಮಂಡಳಿಯಿಂದ ದೊರೆಯುವ ವಿವಿಧ ಸೇವೆಗಳು, ಸೌಲಭ್ಯಗಳು ಹಾಗೂ ಯೋಜನೆಗಳ ಕುರಿತು ಮಾಹಿತಿ ನೀಡಿದರು. ಕೋರಮಂಡಲ್ ಫರ್ಟಿಲೈಸರ್ಸ್ ಕಂಪನಿಯ ವ್ಯವಸ್ಥಾಪಕ ಬಸವರಾಜ್ ಹಾಗೂ ಪ್ರತಿನಿಧಿ ಕಿಶೋರ್ ಕುಮಾರ್ ಅವರು ಕಂಪನಿಯ ವಿವಿಧ ಕೃಷಿ ಉತ್ಪನ್ನಗಳ ಬಳಕೆ ಮತ್ತು ಅವುಗಳ ಪ್ರಯೋಜನಗಳ ಕುರಿತು ಪ್ರಾತ್ಯಕ್ಷಿಕೆ ಮೂಲಕ ವಿವರಿಸಿದರು.

ಕಾಫಿ ಮಂಡಳಿಯ ಹಿರಿಯ ಸಂಪರ್ಕಾಧಿಕಾರಿ ಡಾ.ರಂಜಿತ್ ಕುಮಾರ್ ಅವರು, ಸೆಂಟರ್ ಆಫ್ ಎಕ್ಸಲೆನ್ಸ್ ಪ್ರಯೋಗಾಲಯದಲ್ಲಿ ಲಭ್ಯವಿರುವ ಮಣ್ಣು, ನೀರು ಹಾಗೂ ಕಾಫಿ ಮಾದರಿಗಳ ಪರೀಕ್ಷೆ ಸೇರಿ ವಿವಿಧ ತಾಂತ್ರಿಕ ಸೇವೆಗಳ ಬಗ್ಗೆ ಬೆಳೆಗಾರರಿಗೆ ಮಾಹಿತಿ ನೀಡಿದರು. ಬಳಿಕ ಎನ್.ಕೆ.ಜಿ. ಕಾಫಿ ಕ್ಯೂರಿಂಗ್ ವರ್ಕ್ಸ್‌ಗೆ ಭೇಟಿ ನೀಡಿ ಕಾಫಿ ಸಂಸ್ಕರಣೆ ಹಾಗೂ ರಫ್ತು ಪ್ರಕ್ರಿಯೆಯನ್ನು ವೀಕ್ಷಿಸಲಾಯಿತು.

ಸಂಸ್ಥೆಯ ವ್ಯವಸ್ಥಾಪಕ ವಿನೋದ್ ಹಾಗೂ ನಿರ್ವಾಹಕ ದಿವ್ಯದರ್ಶನ್ ಅವರು ರಫ್ತು ಗುಣಮಟ್ಟದ ಕಾಫಿ ಉತ್ಪಾದನೆಯಲ್ಲಿ ಪಾಲಿಸಬೇಕಾದ ಮಾನದಂಡಗಳು, ರಾಸಾಯನಿಕ ಅವಶೇಷಗಳ ನಿಯಂತ್ರಣ ಹಾಗೂ ಅಂತಾರಾಷ್ಟ್ರೀಯ ಮಾರುಕಟ್ಟೆಯ ಬೇಡಿಕೆಗಳಿಗೆ ಅನುಗುಣವಾಗಿ ಬೆಳೆಗಾರರು ಅನುಸರಿಸಬೇಕಾದ ಕ್ರಮಗಳ ಕುರಿತು ಮಾಹಿತಿ ನೀಡಿದರು.

ಪ್ರಗತಿಪರ ಕಾಫಿ ಬೆಳೆಗಾರ ಹೆಚ್.ಎಸ್ .ಧರ್ಮರಾಜ್ ಅವರು ಕಾಫಿ ಮಾರಾಟದ ಸಂದರ್ಭದಲ್ಲಿ ಬೆಳೆಗಾರರು ಪಾಲಿಸಬೇಕಾದ ಗುಣಮಟ್ಟದ ಕ್ರಮಗಳು ಹಾಗೂ ಮಾರುಕಟ್ಟೆ ನಿರ್ವಹಣೆಯ ಕುರಿತು ಮಾರ್ಗದರ್ಶನ ನೀಡಿದರು. ಕಾಫಿ ಬೆಳೆಗಾರರಿಗೆ ಆಧುನಿಕ ಕೃಷಿ ತಂತ್ರಜ್ಞಾನ, ಗುಣಮಟ್ಟದ ಉತ್ಪಾದನೆ, ವೈಜ್ಞಾನಿಕ ಸಂಸ್ಕರಣೆ ಹಾಗೂ ರಫ್ತು ಅವಕಾಶಗಳ ಕುರಿತು ಸಮಗ್ರ ಮಾಹಿತಿ ನೀಡಲಾಯಿತು.

ಕಸಬಾ ಹೋಬಳಿ ಬೆಳೆಗಾರರ ಸಂಘದ ಅಧ್ಯಕ್ಷ ಕೆ.ವಿ.ಮೇಘರಾಜ್, ಗೌರವ ಕಾರ್ಯದರ್ಶಿ ಎನ್.ಡಿ.ರಾಕೇಶ್, ಸಂಘದ ಪದಾಧಿಕಾರಿಗಳು, ನಿರ್ದೇಶಕರು ಹಾಗೂ ಕಾಫಿ ಬೆಳೆಗಾರರು ಭಾಗವಹಿಸಿದ್ದರು.

# ನೀಟ್ ಅಕ್ರಮ ಖಂಡಿಸಿ ಜು. 24ಕ್ಕೆ ಪ್ರತಿಭಟನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ದೇಶದಲ್ಲಿ ನಡೆಯುತ್ತಿರುವ ಪರೀಕ್ಷಾ ಅಕ್ರಮಗಳ ಸೋರಿಕೆ ನೇಮಕಾತಿ ವಿಳಂಬ ಹಾಗೂ ನಿರುದ್ಯೋಗ ಸಮಸ್ಯೆ ಖಂಡಿಸಿ ವಿವಿಧಪರ ಸಂಘಟನೆಗಳಿಂದ ಜು. 24ರಂದು ಪ್ರತಿಭಟನೆ ನಡೆಸಲಾಗುವುದು ಎಂದು ಮುಖಂಡರಾದ ಸಿ.ಜಿ. ರವಿ ಹಾಗೂ ಸಿಐಟಿಯು ಮಂಜುನಾಥ್ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ದೇಶದ ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ ಅವರು ವಿದ್ಯಾರ್ಥಿಗಳ ಹೋರಾಟಕ್ಕೆ ಸ್ಪಂದಿಸದೆ ಅವರ ಮೇಲೆ ನಡೆಸಿದ ಹಲ್ಲೆಯನ್ನು ಖಂಡಿಸಿ ತಾಲೂಕಿನ ವಿವಿಧ ಪರ ಸಂಘಟನೆಗಳು ಪ್ರತಿಭಟನೆಗೆ ಮುಂದಾಗಿದ್ದು ಇಂತಹ ಬೆಳವಣಿಗೆಯನ್ನು ಖಂಡಿಸುತ್ತೇವೆ.

ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಪಾರದರ್ಶಕತೆ ಮತ್ತು ನ್ಯಾಯಯುತ ವ್ಯವಸ್ಥೆಗೆ ಆಗ್ರಹಿಸಿ ವಿದ್ಯಾರ್ಥಿಗಳು ನಡೆಸಿದ ಶಾಂತಿಯುತ ಪ್ರತಿಭಟನೆಯನ್ನು ಪೊಲೀಸ್ ಬಲದ ಮೂಲಕ ಹತ್ತಿಕ್ಕುತ್ತಿರುವುದು ಖಂಡನೀಯ



ವಿದ್ಯಾರ್ಥಿಗಳ ಮೇಲೆ ನಡೆದ ಹಲ್ಲೆ ಬೆದರಿಕೆ ಹಾಗೂ ಕಿರುಕುಳದ ಘಟನೆಗಳ ಕುರಿತು ಸ್ವತಂತ್ರ ತನಿಖೆ ನಡೆಸಬೇಕು ಎಂದು ಒತ್ತಾಯಿಸಿದರು.

ಕಳೆದ 12 ವರ್ಷಗಳಲ್ಲಿ ದೇಶದಲ್ಲಿ 152ಕ್ಕೂ ಹೆಚ್ಚು ಪೇಪರ್ ಸೋರಿಕೆ ಪ್ರಕರಣಗಳು ಬೆಳಕಿಗೆ ಬಂದಿದ್ದು ಸುಮಾರು 7.5 ಕೋಟಿಗೂ ಅಧಿಕ ಅಭ್ಯರ್ಥಿಗಳ ಭವಿಷ್ಯದ ಮೇಲೆ ಪರಿಣಾಮ ಬೀರಿದೆ. ನೀಟ್ ಯುಜಿ ಪರೀಕ್ಷೆ ಸೇರಿದಂತೆ ಹಲವು ಪರೀಕ್ಷೆಗಳಲ್ಲಿ ಕಂಡು ಬಂದ ಅಕ್ರಮಗಳು ಹಾಗೂ ರಾಷ್ಟ್ರೀಯ ಪರೀಕ್ಷಾ ಸಂಸ್ಥೆಯ ಕಾರ್ಯವೈಖರಿ ವಿದ್ಯಾರ್ಥಿಗಳಲ್ಲಿ ಆತಂಕ ಮೂಡಿಸಿದೆ ಎಂದರು.

ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನಿ ರಾಜೀನಾಮೆ ನೀಡಬೇಕು ಎನ್‌ಟಿಎಯನ್ನು ವಿಸರ್ಜಿಸಿ ಹೊಸ ಪಾರದರ್ಶಕ ಪರೀಕ್ಷಾ ವ್ಯವಸ್ಥೆ ಜಾರಿಗೆ ತರಬೇಕು ಪೇಪರ್ ಸೋರಿಕೆ ಪ್ರಕರಣಗಳ ಕುರಿತು ಸ್ವತಂತ್ರ ತನಿಖೆ ನಡೆಸಬೇಕು ವಾರ್ಷಿಕ ಪರೀಕ್ಷೆ ಮತ್ತು ನೇಮಕಾತಿ ವೇಳಾಪಟ್ಟಿಯನ್ನು ಕಡ್ಡಾಯಗೊಳಿಸಬೇಕು ಹಾಗೂ ನೀಟ್ ಪರೀಕ್ಷೆಯ ಮೇಲೆ ಓಎಂಆರ್ ದಾಖಲೆಗಳನ್ನು ಬಹಿರಂಗಪಡಿಸಬೇಕು ಎಂದರು.

ಮುಖಂಡರಾದ ಶಂಕರ್ ಬರಗೂರು, ದೊರೆಸ್ವಾಮಿ, ತೇಜಸ್ ಗೌಡ, ಮಂಜೇಗೌಡ, ರವಿ, ಕಲ್ಕೆರೆ ವಾಸು, ರಾಘವೇಂದ್ರ, ಪಾಟೀಲ್ ಮತ್ತಿತರರಿದ್ದರು.

# ಬೆಂಗಳೂರಿನಲ್ಲಿ ಗುಂಡಿ ಮುಕ್ತ ರಸ್ತೆಗೆ ಕ್ರಮ ಏನು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೆಂಗಳೂರು: ಸಿಲಿಕಾನ್ ಸಿಟಿ ಬೆಂಗಳೂರಿನಲ್ಲಿ ಫುಟ್ ಪಾತ್ ಒತ್ತುವರಿ ತೆರವು ಕಾರ್ಯಾಚರಣೆಯ ಮೂಲಕ ಸಚಿವ ಕೃಷ್ಣ ಬೈರೇಗೌಡ ಗಮನ ಸೆಳೆದಿದ್ದಾರೆ. ಪರ- ವಿರೋಧ ಚರ್ಚೆಯ ನಡುವೆಯೂ ಫುಟ್ ಪಾತ್ ತೆರವು ಕಾರ್ಯಾಚರಣೆ ಬಿರುಸಿನಿಂದ ಸಾಗುತ್ತಿದೆ. ಪಾಲಿಕೆಯ ನಡೆಗೆ ಒಂದು ವರ್ಗ ಮೆಚ್ಚುಗೆ ಸೂಚಿಸಿದರೆ, ಮತ್ತೊಂದು ವಿಭಾಗ ವಿರೋಧಿಸಿದೆ.

ಇಷ್ಟಕ್ಕೆ ಸುಮ್ಮನಾಗದ ಸಚಿವರು ಬೀಡಾಡಿ ವಾಹನಗಳ ತೆರವು ಹಾಗೂ ಫುಟ್ ಪಾತ್ ನಲ್ಲಿ ವಾಹನ ಚಲಾಯಿಸಿದರೆ ದುಪ್ಪಟ್ಟು ದಂಡದ ಕ್ರಮಕ್ಕೂ ಮುಂದಾಗಿದ್ದಾರೆ. ಆದರೆ ಬೆಂಗಳೂರಿನ ಜನರಿಗೆ ಬಹುಮುಖ್ಯವಾಗಿ ಕಾಡುತ್ತಿರುವ ಪ್ರಶ್ನೆ ನಗರದ ರಸ್ತೆಗುಂಡಿಗಳಿಗೆ ಪರಿಹಾರ.

ಸಚಿವರಾಗಿ ಕೃಷ್ಣ ಬೈರೇಗೌಡ ಅವರು ಆರಂಭಿಕವಾಗಿ ಕೆಲವೊಂದು ಬಿರುಸಿನ ಹೆಜ್ಜೆಗಳನ್ನು ಇಟ್ಟಿದ್ದಾರೆ. ಪರ- ವಿರೋಧ ಚರ್ಚೆ ಏನೇ ಇದ್ದರೂ ಸಚಿವರ ಕಾರ್ಯವೈಖರಿ ಗಮನ ಸೆಳೆಯುವಂತದ್ದೇ. ಆದರೆ, ಬೆಂಗಳೂರಿನ ಜನರ ಮತ್ತೊಂದು ಬಹುಮುಖ್ಯ ಬೇಡಿಕೆಯತ್ತ ಸಚಿವರು ಯಾವ ಹೆಜ್ಜೆಯನ್ನು ಇಡುತ್ತಾರೆ ಎಂಬುವುದು ಕೂಡಾ ಪ್ರಾಮುಖ್ಯತೆಯನ್ನು ಪಡೆದುಕೊಳ್ಳುತ್ತಿದೆ.

ರಾಜ್ಯದಲ್ಲಿ ಸರ್ಕಾರ ಬದಲಾದರೂ ಬೆಂಗಳೂರಿನ ರಸ್ತೆ ಗುಂಡಿಗಳಿಗೆ ಪರಿಹಾರ ಕಂಡಿಲ್ಲ. ಈ ಹಿಂದೆ ಬೆಂಗಳೂರು ಅಭಿವೃದ್ಧಿ ಇಲಾಖೆ ಡಿ ಕೆ ಶಿವಕುಮಾರ್ ಅವರ ಕೈಯಲ್ಲಿತ್ತು. ಬ್ರ್ಯಾಂಡ್ ಬೆಂಗಳೂರು ಹೆಸರಿನಲ್ಲಿ ಒಂದಿಷ್ಟು ಗಮನ ಸೆಳೆದರೂ ಅದನ್ನು ಜಾರಿಗೊಳಿಸಲು ಸಾಧ್ಯವಾಗಿರಲಿಲ್ಲ. ಹೀಗಾಗಿ ಸಚಿವ ಕೃಷ್ಣ ಬೈರೇಗೌಡ ಅವರಲ್ಲಿ ಸಹಜವಾಗಿ ಇಂತಹ ಒಂದು ನಿರೀಕ್ಷೆ ಜನರಲ್ಲಿದೆ. ಅದರಲ್ಲೂ ನಗರದ ರಸ್ತೆ ಗುಂಡಿಗಳಿಗೆ ಪರಿಹಾರ ಕೊಡಿಸಿ ಎಂಬ ಬೇಡಿಕೆಯನ್ನು ಜನರು ಇಡುತ್ತಿದ್ದಾರೆ.

ಬೆಂಗಳೂರಿನ ರಸ್ತೆ ಗುಂಡಿಗಳು ರಾಷ್ಟ್ರಮಟ್ಟದಲ್ಲಿ ಚರ್ಚೆಗೆ ಒಳಗಾಗಿವೆ. ಬೆಂಗಳೂರು ನಗರದಲ್ಲಿ ಸಾಕಷ್ಟು ಉದ್ದಿಮೆಗಳಿವೆ. ಹೀಗಾಗಿ ಉದ್ಯಮಿಗಳು ರಸ್ತೆ ಗುಂಡಿಗಳ ಬಗ್ಗೆ ಧ್ವನಿ ಎತ್ತಿದಾಗ



ಅವು ರಾಷ್ಟ್ರಮಟ್ಟದಲ್ಲಿ ಸುದ್ದಿ ಮತ್ತು ಸದ್ದು ಮಾಡುತ್ತವೆ. ಈ ಹಿಂದೆ ಡಿಕೆ ಶಿವಕುಮಾರ್ ಅವರು ಬೆಂಗಳೂರು ಅಭಿವೃದ್ಧಿ ಖಾತೆಯ ಜವಾಬ್ದಾರಿ ವಹಿಸಿಕೊಂಡಿದ್ದ ಸಂದರ್ಭದಲ್ಲಿ ಕಿರಣ್ ಮಜುಂದಾರ್ ಶಾ, ಮೋಹನ್ ದಾಸ್ ಪೈ ಸೇರಿದಂತೆ ಅನೇಕ ಉದ್ಯಮಿಗಳು ಈ ಬಗ್ಗೆ ಧ್ವನಿ ಎತ್ತಿದ್ದರು. ರಸ್ತೆಯಲ್ಲಿ ವಾಹನ ಚಲಾಯಿಸುವುದು ಕಷ್ಟ ಸಾಧ್ಯ ಎಂದು ಅಸಮಾಧಾನ ಹೊರಹಾಕಿದ್ದರು. ಆದರೆ ಪರಿಹಾರ ಮಾತ್ರ ಸಿಕ್ಕಿಲ್ಲ.

ಬೆಂಗಳೂರಿನ ರಸ್ತೆಗಳಲ್ಲಿ ಇರುವ ಗುಂಡಿಗಳ ಪೈಕಿ ಬಹುತೇಕ ಮುಚ್ಚಲಾಗಿದೆ ಎಂಬುವುದು ಸರ್ಕಾರದ ವಾದವಾಗಿದೆ. ಕಳೆದ ಅಧಿವೇಶನದಲ್ಲಿ ಈ ಬಗ್ಗೆ ಸರ್ಕಾರ ಅಂಕಿ ಅಂಶಗಳನ್ನು ನೀಡಿತ್ತು. ಯಾವ ಪಾಲಿಕೆಯಲ್ಲಿ ಎಷ್ಟು ರಸ್ತೆಗುಂಡಿಗಳನ್ನು ಮುಚ್ಚಲಾಗಿದೆ ಎಂಬ ವಿವರ ನೀಡಿತ್ತು.

ಬೆಂಗಳೂರು ಕೇಂದ್ರದಲ್ಲಿ ರಸ್ತೆ ಗುಂಡಿಗಳ ಸಂಖ್ಯೆ - 2735 ಹಾಗೂ ಮುಚ್ಚಲಾಗಿರುವ ರಸ್ತೆ ಗುಂಡಿಗಳು- 2657 ಎಂದು ತಿಳಿಸಿತ್ತು. ಬಾಕಿ ಇರುವುದು 78 ಎಂಬ ವಿವರ ನೀಡಿತ್ತು. ಅದೇ ರೀತಿಯಲ್ಲಿ ಬೆಂಗಳೂರು ಪೂರ್ವದಲ್ಲಿ ರಸ್ತೆ ಗುಂಡಿಗಳ ಸಂಖ್ಯೆ - 7340, ಮುಚ್ಚಲಾಗಿರುವ ರಸ್ತೆ ಗುಂಡಿಗಳು- 6935, ಬಾಕಿ ಇರುವ ಗುಂಡಿಗಳ ಸಂಖ್ಯೆ 405 ಎಂದು ತಿಳಿಸಿತ್ತು.

ಬೆಂಗಳೂರು ಪಶ್ಚಿಮದಲ್ಲಿ ರಸ್ತೆ ಗುಂಡಿಗಳ ಸಂಖ್ಯೆ - 8195, ಮುಚ್ಚಲಾಗಿರುವ ರಸ್ತೆ ಗುಂಡಿಗಳು- 8064 ಹಾಗೂ ಬಾಕಿ -131. ಬೆಂಗಳೂರು ಉತ್ತರದಲ್ಲಿ ರಸ್ತೆ ಗುಂಡಿಗಳ ಸಂಖ್ಯೆ - 18246, ಮುಚ್ಚಲಾಗಿರುವ ರಸ್ತೆ ಗುಂಡಿಗಳು- 17788 ಹಾಗೂ ಬಾಕಿ - 458 ಇವೆ ಎಂದು ಮಾಹಿತಿ ನೀಡಿತ್ತು.

ಇನ್ನುಳಿದಂತೆ ಬೆಂಗಳೂರು ದಕ್ಷಿಣದಲ್ಲಿ ರಸ್ತೆ ಗುಂಡಿಗಳ ಸಂಖ್ಯೆ - 4634 ಇತ್ತು. ಈ ಪೈಕಿ ಮುಚ್ಚಲಾಗಿರುವ ರಸ್ತೆ ಗುಂಡಿಗಳು- 4443 ಹಾಗೂ ಬಾಕಿ ಉಳಿದವು 191 ಎಂಬ ವಿವರನ್ನು ನೀಡಿತ್ತು. ಇದರ ಜೊತೆಗೆ ಐದು ಪಾಲಿಕೆಗಳಲ್ಲಿ ರಸ್ತೆ ಗುಂಡಿ ಮುಚ್ಚಲು 33.85 ಕೋಟಿ ವೆಚ್ಚವಾಗಿದೆ ಎಂದು ಸದನಕ್ಕೆ ಮಾಹಿತಿಯನ್ನು ನೀಡಿತ್ತು.

ಅಷ್ಟೇ ಅಲ್ಲದೆ, ಮಹದೇವಪುರ ವಿಧಾನಸಭಾ ಕ್ಷೇತ್ರ, ಯಶವಂತಪುರ, ದಾಸರಹಳ್ಳಿ, ಬೆಂಗಳೂರು ದಕ್ಷಿಣ, ರಾಜರಾಜೇಶ್ವರಿ ನಗರ, ಮಲ್ಲೇಶ್ವರಂ, ಕೆ ಆರ್ ಪುರಂ, ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರಗಳಲ್ಲಿ ಅತೀ ಹೆಚ್ಚಿನ ಸಂಖ್ಯೆಯಲ್ಲಿ ಗುಂಡಿಗಳು ಬಿದ್ದಿದ್ದವು ಎಂದು ತಿಳಿಸಿತ್ತು.

# ಕಾಲೇಜುಗಳಲ್ಲಿ ಸೇವಾದಳ ಶಾಖೆ ಬಲಪಡಿಸಿ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಜಿಲ್ಲೆಯ ಪ್ರತಿಯೊಂದು ಪದವಿ ಪೂರ್ವ ಕಾಲೇಜಿನಲ್ಲೂ ಭಾರತ ಸೇವಾದಳದ ಶಾಖೆಗಳನ್ನು ಮತ್ತಷ್ಟು ಬಲಪಡಿಸುವ ಅಗತ್ಯವಿದೆ. ಈ ನಿಟ್ಟಿನಲ್ಲಿ ಎಲ್ಲಾ ಪ್ರಾಂಶುಪಾಲರು ಸಹಕಾರ ನೀಡಬೇಕೆಂದು ಪದವಿಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಗಂಗಾಧರ್ ಕರೆ ನೀಡಿದರು.

ನಗರದ ಪದವಿಪೂರ್ವ ಶಿಕ್ಷಣ ಇಲಾಖೆ ಸಭಾಂಗಣದಲ್ಲಿ ರಾಷ್ಟ್ರಧ್ವಜ ಅಂಗೀಕಾರ ದಿನಾಚರಣೆ ಅಂಗವಾಗಿ ಬುಧವಾರ ಭಾರತ ಸೇವಾದಳ ಜಿಲ್ಲಾ ಸಮಿತಿ ಹಾಗೂ ಶಾಲಾ ಶಿಕ್ಷಣ ಇಲಾಖೆ, ಪದವಿಪೂರ್ವ ವಿಭಾಗದ ಆಶ್ರಯದಲ್ಲಿ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರಿಗೆ ಭಾರತ ಸೇವಾದಳ ಮಾಹಿತಿ ಕಾರ್ಯಾಗಾರ ಹಾಗೂ ಉಚಿತ ಆರೋಗ್ಯ ತಪಾಸಣಾ ಶಿಬಿರದಲ್ಲಿ ಮಾತನಾಡಿದ ಅವರು, ಜಿಲ್ಲೆಯಲ್ಲಿ ಭಾರತ ಸೇವಾದಳದ ಚಟುವಟಿಕೆ ಅತ್ಯುತ್ತಮವಾಗಿ ನಡೆಯುತ್ತಿವೆ. ಮುಂದಿನ ದಿನಗಳಲ್ಲಿ ಇನ್ನಷ್ಟು ವಿಸ್ತರಿಸಲು ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳನ್ನು ತೊಡಗಿಸಿಕೊಳ್ಳಬೇಕೆಂದು ಹೇಳಿದರು.

ಭಾರತ ಸೇವಾದಳದ ವಲಯ ಸಂಘಟಕಿ ವಿ.ಎಸ್. ರಾಣಿ ಮಾತನಾಡಿ, ಸೇವಾದಳದ ಉದ್ದೇಶ, ಕಾರ್ಯಚಟುವಟಿಕೆಗಳು, ರಾಷ್ಟ್ರಧ್ವಜದ ಮಹತ್ವ, ರಾಷ್ಟ್ರಗೀತೆಯ ಗೌರವ ಹಾಗೂ ಧ್ವಜವಂದನೆಯ ಸರಿಯಾದ ವಿಧಾನದ ಕುರಿತು ಸಮಗ್ರ ಮಾಹಿತಿ ನೀಡಿದರು.

ಹೊಳೆನರಸೀಪುರ ತಾಲ್ಲೂಕು ಭಾರತ ಸೇವಾದಳ ಸಮಿತಿಯ ಸದಸ್ಯೆ ಹಾಗೂ ನಿವೃತ್ತ ಪ್ರಾಂಶುಪಾಲೆ ಜಯಶೀಲಮ್ಮ ಅವರನ್ನು ಭಾರತ ಸೇವಾದಳದ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು. ಕಾರ್ಯಕ್ರಮದ ಅಂಗವಾಗಿ ಮಹಾಲಕ್ಷ್ಮಿ ಮಂಜಪ್ಪ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯ ಡಾ.ಉಮೇಶ್ ನೇತೃತ್ವದ ವೈದ್ಯರ ತಂಡದಿಂದ ಉಚಿತ ಆರೋಗ್ಯ ತಪಾಸಣೆ ನಡೆಸಲಾಯಿತು. ಅಲ್ಲದೆ ಸುನಂದ ನೇತ್ರ ಚಿಕಿತ್ಸಾಲಯದ ನೇತ್ರ ತಜ್ಞ ಡಾ. ಚಿರಂತ್ ಅವರ ತಂಡದಿಂದ ಉಚಿತ ನೇತ್ರ ತಪಾಸಣೆಯೂ ನಡೆಯಿತು.

ಪ್ರಾಂಶುಪಾಲರ ಸಂಘದ ಅಧ್ಯಕ್ಷ ಪ್ರಶಾಂತ್ ಕುಮಾರ್, ಕಾರ್ಯದರ್ಶಿ ತಿಮ್ಮೇಗೌಡ, ರಾಜ್ಯ ಸಂಘದ ಉಪಾಧ್ಯಕ್ಷ ದೇವರಾಜು, ಸಂಘದ ಖಜಾಂಚಿ ಚೌಡಯ್ಯ ಕಟ್ನಾವಾಡಿ, ಯುವಜನ ಸೇವಾಧಿಕಾರಿ ನಿತ್ಯ ಹಾಗೂ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿ ಉಪಸ್ಥಿತರಿದ್ದರು.

## ಅಪಘಾತ: ಬಸ್ ನಿರ್ವಾಹಕ ಸಾವು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಕ್ಯಾಂಟರ್ ಡಿಕ್ಕಿಯಾಗಿ ಬಿಎಂಟಿಸಿ ಬಸ್ ನಿರ್ವಾಹಕ ಮೃತಪಟ್ಟಿರುವ ಘಟನೆ ತಾಲ್ಲೂಕಿನ ಶಾಂತಿಗ್ರಾಮ ಬಳಿ ನಡೆದಿದೆ.

ಬೇಲೂರು ತಾಲ್ಲೂಕು ಹುಣಸಿನಕೆರೆ ಗ್ರಾಮದ ಮೋಹನ್‌ಕುಮಾರ್ (36) ಮೃತರು. ರಜೆ ಹಿನ್ನಲೆಯಲ್ಲಿ ಊರಿಗೆ ಬಂದಿದ್ದ ಮೋಹನ್‌ಕುಮಾರ್ ಜು. 21ರ ಬೆಳಿಗ್ಗೆ 4 ಗಂಟೆ ಸಮಯದಲ್ಲಿ ಬೆಂಗಳೂರಿಗೆ ಬೈಕ್‌ನಲ್ಲಿ ಹೋಗುತ್ತಿದ್ದಾಗ ಕ್ಯಾಂಟರ್ ಡಿಕ್ಕಿಯಾಗಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಶಾಂತಿಗ್ರಾಮ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಇತಿಹಾಸದಲ್ಲಿ ಈ ದಿನ

### ಜುಲೈ-24

1857: ಭಾರತದ ಸ್ವಾತಂತ್ರ್ಯ ಹೋರಾಟದ ಪ್ರಮುಖ ನಾಯಕ ಮಂಗಲ್ ಪಾಂಡೆ ಅವರ ವಿಚಾರಣೆಗೆ ಸಂಬಂಧಿಸಿದ ಮಹತ್ವದ ಬೆಳವಣಿಗೆಗಳು ನಡೆದವು.

1911: ಅಮೆರಿಕದ ಪುರಾತತ್ವಶಾಸ್ತ್ರಜ್ಞ ಹಿರಾಮ್ ಬಿಂಗ್‌ಹ್ಯಾಮ್ ಅವರು ಪೆರುವಿನ ಪ್ರಸಿದ್ಧ ಪ್ರಾಚೀನ ನಗರ ಮಾಚು ಪಿಚ್ಚುವನ್ನು ಜಗತ್ತಿಗೆ ಪರಿಚಯಿಸಿದರು.

1969: ಅಪೋಲೊ11 ಬಾಹ್ಯಾಕಾಶ ನೌಕೆಯ ಗಗನಯಾತ್ರಿಗಳು ಚಂದ್ರನ ಐತಿಹಾಸಿಕ ಯಾತ್ರೆ ಪೂರ್ಣಗೊಳಿಸಿ ಭೂಮಿಗೆ ಸುರಕ್ಷಿತವಾಗಿ ಮರಳಿದರು.

1974: ಟರ್ಕಿಯ ಸೈಪ್ರಸ್ ಆಕ್ರಮಣದ ಬಳಿಕ ಗ್ರೀಸ್‌ನಲ್ಲಿ ಪ್ರಜಾಪ್ರಭುತ್ವ ಆಡಳಿತ ಪುನಃಸ್ಥಾಪನೆಯಾಯಿತು.

2010: ವಿಕಿಲೀಕ್ಸ್ ಅಫ್ಘಾನಿಸ್ತಾನ ಯುದ್ಧಕ್ಕೆ ಸಂಬಂಧಿಸಿದ ಸಾವಿರಾರು ರಹಸ್ಯ ದಾಖಲೆಗಳನ್ನು ಬಿಡುಗಡೆ ಮಾಡಿತು.

**ಜನನ**

1802: ಅಲೆಕ್ಸಾಂಡರ್ ಡ್ಯೂಮಾ, ಖ್ಯಾತ ಫ್ರೆಂಚ್ ಕಾದಂಬರಿಕಾರ

1897: ಅಮೆಲಿಯಾ ಇಯರ್‌ಹಾರ್ಟ್, ಪ್ರಸಿದ್ಧ ಅಮೆರಿಕನ್ ವೈಮಾನಿಕ

1925: ಅಜಿತ್ ಪ್ರಸಾದ್ ಜೈನ್, ಭಾರತೀಯ ರಾಜಕಾರಣಿ

**ಮರಣ**

1963: ಅಮೆರಿಕದ ಪ್ರಸಿದ್ಧ ಕವಿ ಜಾನ್ ಎಫ್. ಕೆನ್ನಡಿ

1980: ಪೀಟರ್ ಸೆಲ್ಲರ್ಸ್, ಖ್ಯಾತ ಬ್ರಿಟಿಷ್ ನಟ

2012: ಶಮೀಮ್ ಬಾನು, ಭಾರತೀಯ ನಟಿ

# ಕಡುಬಿನ ಕಳಸಿಗೆಯೆಂಬ ಮಿಲಿಟರಿ ಟ್ಯಾಂಕು-4

**ಧನಂಜಯ ಜೀವಾಳ ಬಿ.ಕೆ.**

ಅದೊಂದು ದಿನ, ಮಾರುದ್ದನೆಯ ಮೀನುಗತ್ತಿಗಳನ್ನು ಹಿಡಿದುಕೊಂಡು ಎರಡು ಗ್ಯಾಸ್ ಲೈಟುಗಳೊಂದಿಗೆ ಮೀನು ಕಡಿಯಲು ಹೊರಟವರು ವಾರದಿಂದ ಸುರಿದು; ಇಂದು ಬೆಳಗಿನಿಂದ ಕೊಂಚ ವಿರಾಮಕೊಟ್ಟಿದ್ದ ಮಹಾಮಳೆಯ ಕುರಿತಾಗಿ ಬಣ್ಣಣ್ಣೆ ಮಾತನಾಡುತ್ತಾ, ಶಿವರಾಜಣ್ಣನ ಎರಡನೇ ಮಗಳು ವೇದಾವತಿಯ ದೇಹದಾರ್ಢ್ಯವನ್ನು ಹೊಗಳುತ್ತಾ ಯಂತಾ ಮಾರಾಯ; ಒಳ್ಳೇ ಗ್ವಾವೆಹಂದಿ ಬೆಳ್ದಂಗೆ ಬೆಳ್ದಾವ್ಳಲ! ಎಂದು ಅವರು ಮೂವರಿಗೆ ಮಾತ್ರವೇ ಅರ್ಥವಾಗಬಹುದಾದ ಕೋಡ್‌ವರ್ಡ್‌ಗಳಲ್ಲಿ ಮಾತನಾಡುತ್ತಾ ಒಬ್ಬರನೊಬ್ಬರು ಕಿಚಾಯಿಸುತ್ತಾ ಊರಬಾಗಿಲು ದಾಟಿ, ಗದ್ದೆ ಬಯಲಿಗೆ ಎಂಟ್ರಿ ಕೊಟ್ಟರು. ಗ್ಯಾಸ್‌ಲೈಟಿನ ತಿರುಪು ತಿರುಗಿಸುವುದರ ಮೂಲಕ ಬೆಳಕನ್ನು ಹೆಚ್ಚು ಮಾಡಿಕೊಂಡು ಒಂದೂ-ಒಂದೂವರೆ ಅಡಿ ಎತ್ತರದವರೆಗೆ ನಿಂತಿದ್ದ ನೀರಿನಲ್ಲಿನ ಮೀನುಗಳು ತಮ್ಮತ್ತ ಬರುವುದನ್ನೇ ಕಾತರದಿಂದ ಕಾಯುತ್ತಾ ಕತ್ತಿಗಳನ್ನು ಎತ್ತಿಹಿಡಿದು ನಿಂತಿದ್ದರು. ಗ್ಯಾಸ್‌ಲೈಟಿನ ಬೆಳಕಿಗೆ ಮೀನು ಬರ್ತಿದ್ದವೋ ಅಥವಾ ಲೈಟಿಗೆ ಬರುವ ಕೀಟಗಳನ್ನು ತಿನ್ನಲೋ ಅಂತೂ ಮೀನುಗಳು ಸಮ್ಮೋಹನಕ್ಕೊಳಗಾದವರಂತೆ ಇವರತ್ತ ಧಾವಿಸಿ ಬರುತಿದ್ದವು. ಕೈಯಲ್ಲಿದ್ದ ಕತ್ತಿಯ ನಿಲುಕಿಗೆ ಮೀನುಗಳು ಬರುವುದನ್ನೇ ತದೇಕಚಿತ್ತದಿಂದ ಕಾಯ್ದು, ತಲೆಯನ್ನೇ ಗುರಿಯಾಗಿಟ್ಟು ಖಡಕ್ಕನೇ ಕಡಿಯುತಿದ್ದರು. ಮೀನುಗಳಲ್ಲದೇ ಆಮೆಗಳು ಮತ್ತು ಹಾವುಗಳು ಸಹಾ ದೀಪದ ಬೆಳಕನ್ನು ನೋಡಿ ನುಗ್ಗಿ ನುಗ್ಗಿ ಬರುತಿದ್ದವು. ಮೂರ್ನಾಲ್ಕು ಅಡಿಯುದ್ದದ ಏಳೆಂಟು ಹಾವುಮೀನುಗಳು ಹಾಗೂ ಹತ್ತನ್ನೆರಡು ಬಾಳೆಮೀನು, ಎರಡು ಆಮೆಗಳನ್ನು ಹಿಡಿದು ತಂದಿದ್ದ ಗೋಣೀಚೀಲಕ್ಕೆ ಹಾಕಿಕೊಂಡರು. ಇದ್ದಕ್ಕಿದ್ದಂತೆ ಮಳೆ ರಪರಪನೆ ಮುಖಕ್ಕೆ ಮೊಳೆ ಹೊಡೆದಂತೆ ದಪ್ಪ ದಪ್ಪ ಹನಿಗಳೊಂದಿಗೆ ರಾಚಲಾರಂಭಿಸಿತು. ಎರಡೂ ಗ್ಯಾಸ್‌ಲೈಟುಗಳೊಳಗೆ ನೀರು ಸೇರಿ ಮ್ಯಾಂಟ್ಲ್‌ಗಳು ಉದುರಿಹೋಗಿ ಲೈಟು ಟುಸ್ಸಾಯಿತು.

ತಲೆಗೆ ಕಟ್ಟಿಕೊಂಡಿದ್ದ ಹೆಡ್‌ಲೈಟಿನ ಬೆಳಕಿನಲ್ಲಿಯೇ ಮನೆಯತ್ತ ಹಿಂದಿರುಗುವ ಯೋಚನೆಯಲ್ಲಿ ಹೊರಟರು.



ಮಳೆಯೊಂದಿಗೆ ಕುಳಿರ್ಗಾಳಿ ಝುಮ್ಮನೆ ಬೀಸಲಾರಂಭಿಸಿತು. ಮಳೆ ಜಾಸ್ತಿಯಾಗಿ, ದೋಣಿ ಬ್ಯಾರಿಯ ಗುಡಿಸಲಿನ ಮುಂದಿನ ಜಗುಲಿಗೆ ಇರಿಚಲು ಹೊಡೆಯದಂತೆ ಕಟ್ಟಿದ್ದ ಚಿಮ್ಮಿ ಸೊಪ್ಪಿನ ತಡುಕಲ ಮರೆಗೆ ಬಂದುನಿಂತವರನ್ನು ದೋಣಿ ಬ್ಯಾರಿಯ ಹೆಂಡತಿ ಐಸಮ್ಮ ಬನ್ನಿ ಬನ್ನಿ ಒಳೀಕೇ ಬನ್ನಿ ಎಂದು ಕರೆದಳು. ಮಳೆ ಗಾಳಿಯಲ್ಲಿ ಮೀನು ಕಡಿಯುವ ಉತ್ಸಾಹದಲ್ಲಿ ಕಾಲಿಗೆ ನಿಲುವಿಲ್ಲದಂತೆ ಗದ್ದೆ ಬಯಲಿನಲ್ಲಿ ಒದ್ದುಕೊಂಡು ನಿಂತಿದ್ದ ನೀರಿನಲ್ಲಿ ನಡೆದಾಡಿದ್ದವರಿಗೆ ವಿಪರೀತ ಹಸಿವಾಗುತಿತ್ತು. ಚಳಿಯಿಂದ ಹುಡ್ರು ಹಿಡಿದಿದ್ದವರು ಮನೆಯೊಳಗೆ ನುಸುಳಿಕೊಂಡು ತಗಡಿನ ಡಬ್ಬದೊಳಗೆ ಸೌದೆ ಹಾಕಿ ಬೆಂಕಿ ಹಚ್ಚಿದ್ದ ಅಗ್ಗಿಷ್ಟಿಕೆಯ ಸುತ್ತ ಕುಕ್ಕರನೆ ಕುಳಿತರು. ಮರದ ಬೆಂಚಿನ ಮೇಲೆ ಗೋಣಿಚೀಲ ಹಾಸಿಕೊಂಡು ಶ್ರೀರಂಗಪಟ್ಟಣದ ರಂಗನಾಥನ ಭಂಗಿಯಲ್ಲಿ ಮಲಗಿದ್ದ ದೋಣಿ ಬ್ಯಾರಿ ಎದ್ದು ಕೂತು ಓವ್, ಬನ್ನಿ ಬನ್ನಿ ಮಳೆ ಸಿಕ್ಕಾಪಟ್ಟೆ ಜಾಸ್ತಿಯಾಗಿದೆ, ಹೊಳೆ ಏರ್ತಾನೇ ಇದೆ. ಹ್ಯಂಗೆ ಶಿಕಾರಿ ಚೆನ್ನಾಗಾಯ್ತಾ? ನನಗೂ ಇವತ್ತು ಮಧ್ಯಾಹ್ನ ಒಂದು ದೊಡ್ಡ ಕ್ಯಾಟ್ಲಾಕ್ ಮೀನು ಸಿಕ್ಕಿತ್ತು. ಗದ್ದೆ ಎಲ್ಲಾ ನೀರಲ್ಲಿ ಮುಳುಗಿಹೋಗಿವೆ. ಮೂರ್ದಿನ ಆಯ್ತು ನೀರು ಇಳೀತಲೇ ಇಲ್ಲ. ಆಚೆ ಮೂಲೆ ಮೇಷ್ಟ್ರು ರಾಮಣ್ಣನ ಮನೆ ತವಾ ಇರೋ ರಾಗ್ಯೆಣ್ಣದವರೆಗೂ ನೀರು ಏರಿದೆ. ಆ ಕಡಿದಾಳು ಭೈರಪ್ಪನ ಮನೆಯ ಸಸಿಯೆಲ್ಲಾ ಕಿತ್ತಿಟ್ಟು ಎರಡ್ದಿನ ಆದ್ವು, ಎಲ್ಲಾ ಹಳ್ಳದಲ್ಲಿ ತೇಲಿ ಹೋಗ್ತಿದಾವೆ. ಏನ್ ಹಳ್ಳಾ ಬಂದಾದೆ ಮಾರಾಯ್ರಾ. ಮಧ್ಯಾಹ್ನ ಹೋಗಿದ್ದೆ ನೋಡಾನ ಅಂತ, ಯಂತ ನೋಡಾದು ದಯ್ಯ ಇದ್ದಾಂಗಿದೆ ಮೀನು! ಒಂದಾಳು ಸೈಜ್ಹು. ಅದರ ಸೈಜ್ಹಿಗೆ ಆ ಗದ್ದೇಲಿ ನಿಂತಿರೋ ನೀರು ಸಾಲ್ತಾ ಇಲ್ಲ. ಮಗುಚಿ ಮಲಕ್ಕಂಡು ತಗ್ಗಿನ ಗದ್ದೆಗೆ ದಾಟಲು ತೊಸೀತಿತ್ತು. ಹೋದವ್ನೇ ಹಿಡ್ಕಂಡೆ ನೋಡಿ, ಹಿಡಿಯಂಗೇ ಇಲ್ಲ, ಅಂಥಾ ದಡಿಯ, ಮೂತೀಲೇ ಗುದ್ದಿ ಬಿಡೋದೇ, ಅಂತೂ ಬಿಡಲಿಲ್ಲ; ತಬ್ಬಿ ಹಿಡ್ಕಂಡೇ, ಎತ್ಕಂಡೆ, ತಲೆ ಕೊಡವಿ ನನ್ನ ಮುಸುಡಿಗೇ ದಿಕ್ ದಿಕ್ ಅನ್ನೋ ಹಾಗೆ ತಿವೀತು ಮಾರಾಯ್ರೆ. ಅಲ್ಲೇ ಹೊಳೇಲಿ ಕೊಚ್ಕಾಂಬದ್ದು ಬಿದ್ದಿದ್ದ ಕೊರ್ಲು ಕೋಲು ಸಿಕ್ತೂ ನೋಡು, ಅದನ್ನೆ ಬಾಗಿಸಿ ಕಿವಿರಿನ ಸಂದಿಗೆ ಹಾಕಿ ಬಾಯಲ್ಲಿ ಎಳೆದು ಹಾಕಿದೆ.



ನಾಯಿ ಬಿದ್ಕಂಡಂಗೆ ಬಿದ್ಕಂತು. ಹದ್ನೈದು ಕೆಜಿ ಇರಬೋದು, ನೀವು ಬಂದಿದ್ದು ಒಳ್ಳೇದಾಯ್ತು. ನಾವಿಬ್ರೇ ಇರೋದು; ಆ ಹದಿನೈದು ಕೇಜಿನ ಯಂತಾ ಮಾಡೋದು, ಹೋಗತ್ತಿಗೆ ತಗಂಡೋಗಿ ಎಂದ.

ತಾವು ಕಡಿದು ತಂದಿದ್ದ ಮೀನಿನಲ್ಲಿ ಒಂದಷ್ಟನ್ನು ಕೊಟ್ಟುಹೋಗೋಣ ಎಂದುಕೊಂಡಿದ್ದವರಿಗೆ ತಮಗೇ ಕ್ಯಾಟ್ಲಾಕ್ ಮೀನಿನ ಉಡುಗೊರೆ ಸಿಗಲಿರುವುದನ್ನು ಕಂಡು ಖುಷಿಯಾಯಿತು. ಅಷ್ಟರಲ್ಲಿ ಐಸಮ್ಮ ಕಡಕ್ಕಾದ ಕಣ್ಣಾ ಟೀ ಮಾಡಿ ಪಟ್ಟಿಪಟ್ಟಿಯ ಗಾಜಿನ ಲೋಟಗಳಲ್ಲಿ ತುಂಬಿ ತಂದಿಟ್ಟಳು.

ಆ ಚಳಿಗೆ ಸುಂಯ್ಯನೆ ಬೀಸುತಿದ್ದ ಗಾಳಿಗೆ ಈಗಾಗಲೇ ಮಳೆಯಲ್ಲಿ ನೆಂದು ತೊಟ್ಟ ಬಟ್ಟೆಯೆಲ್ಲಾ ಮೈಗಂಟಿಕೊಂಡು ತೊಪ್ಪೆಯಾಗಿದ್ದ ಮೂವರೂ ಅಮೃತವೇ ಸಿಕ್ಕಿತೇನೋ ಎಂದುಕೊಂಡು ಬಿಸಿಯನ್ನೂ ಲೆಕ್ಕಿಸದೇ ಎರಡೆರಡೇ ಗುಟುಕಿಗೆ ಗುಳುಂಕರಿಸಿ ಲೋಟಗಳನ್ನು ಒಂದರೊಳಗೊಂದು ತೂರಿಸಿ ಐಸಮ್ಮನ ಕೈಗಿಟ್ಟರು. ಮಳೆ ಕಮ್ಮಿಯಾಗುವ ಸೂಚನೆ ಕಾಣುತ್ತಿಲ್ಲ. ಗುಡಿಸಲಿನ ಪಕ್ಕದಲ್ಲೇ ಇದ್ದ ಮಾವಿನಮರಕ್ಕೆ ದೋಣಿಯನ್ನು ಕಟ್ಟಿ ಹಾಕಿದ್ದ ಬ್ಯಾರಿ ಮೂವರನ್ನೂ ಸೂಕ್ಷ್ಮವಾಗಿ ಗಮನಿಸಿ ಇವರಿಗೆ ಐಸಮ್ಮ ನೀಡಿದ ಕಣ್ಣಾ ಟೀ ಸಾಕಾಗಲಿಲ್ಲವೆಂದುಕೊಂಡ. ಶರಾಬೇನಾದ್ರೂ ಕುಡೀತೀರಾ? ಆ ಸೀಮೆಣ್ಣೆ ರಾಮಣ್ಣನ ಮಗ ಚಂದ್ರ, ಇಲ್ಲಿರಲಿ ಎಂದು ಒಂದು ಕ್ಯಾನು ಸರಾಯಿನ ನಮ್ಮನೆ ಕೋಳಿಗೂಡಲ್ಲಿ ಇಟ್ಟು ಹೋಗ್ಯಾನೆಟಟ ಎಂದ. ರೋಗಿ ಬಯಸಿದ್ದೂ ಹಾಲು ಅನ್ನ, ವೈದ್ಯ ಹೇಳಿದ್ದೂ ಹಾಲು ಅನ್ನ ಎಂದುಕೊಂಡವನೇ ಪುಣ್ಯಮೂರ್ತಿ ಬಿಚ್ಚಿಟ್ಟಿದ್ದ ಹೆಡ್‌ಲೈಟನ್ನು ತೆಗೆದುಕೊಂಡವನೇ ಐಸಮ್ಮಾ, ಕೋಳಿಗೂಡು ಯಾವ್ಕಡೆ?ಟಟ ಎಂದು ಜಗುಲಿ ದಾಟಿ ಕಡ್ಯಾರದತ್ತ ನುಗ್ಗಿದ.

ಇವನು ನುಗ್ಗಿದ ಬರಾಸಿಗೆ ಚಳಿಗಾಳಿಗೆ ಬೆಚ್ಚಗೆ ಮುದುರಿ ತೂಕಡಿಸುತಿದ್ದ ಕೋಳಿಗಳು ಕೂಗಿ ಕ್ಯಾಕರಿಸಿ ದೊಡ್ಡ ಕೋಲಾಹಲವನ್ನೇ ಮಾಡಲಾರಂಬಿಸಿದವು. ಮರದ ಹಲಗೆಯನ್ನು ಅಡ್ಡಇಟ್ಟು ಮುಚ್ಚಿದ ಕೋಳಿಗೂಡಿನ ಬಾಗಿಲು ಸರಿಸಿ ಕ್ಯಾನು ಹೊರತೆಗೆಯಲು ಕೈ ಒಳಗೆ ಹಾಕಿದ ಪುಣ್ಯಮೂರ್ತಿಯ ಕೈಗೆ ಪಠಾರೆಂದು ಏನೋ ಬಾರಿಸಿದಂತಾಯ್ತು. ಓ! ಕೋಳಿ ಕುಕ್ಕಿತೇನೋ ಎಂದುಕೊಂಡು ಕೈ ಹಿಂದೆಗೆದುಕೊಂಡು, ಟಾರ್ಚ್ ಬಿಟ್ಟು ಕ್ಯಾನಿನ ಹ್ಯಾಂಡಲ್ ಎತ್ತಕಡೆ ಇದೆ ಎಂದು ನೋಡಲು ಹೋಗ್ತಾನೇ ರೆಟ್ಟೆಗಾತ್ರದ ಮಂಡಲದಹಾವು! ಕೋಳಿ ಹಿಡಿಯಲು ಬಂದಿದ್ದ ಹಾವು, ಸರಾಯಿ ಕ್ಯಾನನ್ನು ಹೊರತೆಗೆಯಲು ಕೈ ಹಾಕಿದ್ದ ಪುಣ್ಯಮೂರ್ತಿಯ ಮುಂಗೈಗೆ ಬಲವಾಗಿಯೇ ಮುತ್ತಿಕ್ಕಿತ್ತು. (ಮುಂದುವರಿಯುವುದು)

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248